# ಲಿಂಗಾಯತ ಪುನುರುಜ್ಜೀವನ ಪ್ರವಾಹ

*ಡಾ. ಗಂಗಾಂಬಿಕಾ ಪಾಟೀಲ*

*ಕನ್ನಡ ಸಹ -ಪ್ರಾಧ್ಯಾಪಕರು*

*ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ ಬೀದರ*

ಸಾಹಿತ್ಯ ಸಂಸ್ಕೃತಿ ಮತ್ತು ಸಮಾಜ ಈ ಮೂರು ಮಾನವನ ನಾಗರಿಕತೆಯ ಮೂಲಭೂತವಾದ ಮೌಲ್ಯಗಳು. ತದನಂತರದಲ್ಲಿ ರಾಜ್ಯ (ಉಠತಜಡಿಟಿಚಿಟಿಛಿಜ) ರಾಜ್ಯಶಕ್ತಿ ಅದರಲ್ಲಿ ಮೂಡಿ ಬಂದು ಅದು ಇತರ ಅನೇಕ ಶಕ್ತಿಗಳಿಗೆ ಆಶ್ರಯವಾಯಿತು. ಮತಗಳ ಉಗಮ ಕೂಡ ಇವುಗಳ ಹಿನ್ನೆಲೆಯ ಶಕ್ತಿಗಳಿಂದಲೇ ಆದವು. ಇದರ ಉದಾಹರಣೆಯನ್ನು ನಾವು ಇಸ್ಲಾಂ, ಕ್ರಿಸ್ತ ಮತ್ತು ಹಿಂದೂ ಸಮಾಜದಲ್ಲಿ ನೋಡಬಹುದು. ಕುರಾನ ಆಧಾರಿತವಾದ ಇಸ್ಲಾಂ ಮತ ಅದರ ಆಧಾರಿತವಾದ ಸಂಸ್ಕೃತಿ ಮತ್ತು ರಾಜ್ಯ ಅಸ್ತಿತ್ವದಲ್ಲಿ ಬಂದವು. ಇದನ್ನೇ ನಾವು ಇಂದು ಕ್ರೈಸ್ತ ಸಮಾಜದಲ್ಲೂ ಕೂಡ ನೋಡುತ್ತೇವೆ. ಪ್ರೇಶಿತರಿಂದ ಮತ ಸ್ಥಾಪನೆಯ ನಂತರ ಅದರ ಬೆಳವಣಿಗೆ ಸಂಸ್ಕೃತಿ ಮತ್ತು ಸಮಾಜ ವಿಸ್ತಾರದಲ್ಲಿ ರಾಜ್ಯ ಶಕ್ತಿ ಬಹಳ ಮಹತ್ವದ ಪಾತ್ರ ವಹಿಸುತ್ತದೆ.

೧೨ನೇ ಶತಮಾನದ ಮಧ್ಯಕಾಲದಲ್ಲಿ ಬಸವಣ್ಣನವರಿಂದ ಸ್ಥಾಪನೆಯಾದ ಲಿಂಗಾಯತ ಮತ ಆ ಕಾಲದಲ್ಲಿ ಬಹಳ ವ್ಯಾಪಕ ಸಮರ್ಥನೆಯನ್ನು ಪಡೆದುಕೊಂಡು ದೇಶದಾದ್ಯಂತ ವಿಸ್ತಾರ ಹೊಂದಲಿಕ್ಕೆ ಅವರಿಂದ ಸ್ಥಾಪನೆಯಾದ ಅನುಭವ ಮಂಪಟ(ಮಹಾಮನೆ) ಅದರ ಸದಸ್ಯ ಶರಣರಾದ ೭೭೦ ಅಮರಗಣಂಗಳು ಒಂದು ಲಕ್ಷದ ೯೬ ಸಾವಿರ ಜಂಗಮರು ಯೋಗಿಗಳು ಸಂತ ಮಹಾತ್ಮರ ಜೊತೆಗೆ ಕಲ್ಯಾಣದ ತತ್ಕಾಲೀನ ರಾಜನಾದ ಕಲಚೂರಿ ವಂಶದ ಬಿಜ್ಜಳ, ಆತನ ಸಹೋದರಿ ನೀಲಾಂಬಿಕಾ ತಾಯಿಯವರು, ಲಿಂಗಾಯತ ಮತವನ್ನು ಅಪ್ಪಿಕೊಂಡು ನವಮತಕ್ಕೆ ರಾಜ್ಯಶಕ್ತಿ ಜೋಡಿಸಿ ಅದು ವಿಸ್ತಾರವಾಗಿ ಜನಮಾನಸಕ್ಕೆ ತಲುಪಿ, ನವ ಸಂಸ್ಕೃತಿ, ಶರಣಸಂಸ್ಕೃತಿ, ನವಸಾಹಿತ್ಯ, ವಚನ ಸಾಹಿತ್ಯ, ಸಮಾಜದಲ್ಲಿ ಬೇರೂರಿ ಬೆಳೆಯಲು ಬಹು ಮಹತ್ವದ ಪಾತ್ರ ವಹಿಸಿದ್ದವು. ಇದರಿಂದ ಜ್ಞಾನ ಮತ್ತು ವಿಚಾರ ಆಧಾರಿತ ಶರಣ ಸಂಸ್ಕೃತಿ ನಡೆ-ನುಡಿಗಳೆರಡು ಒಂದಾದವರು ರಚಿಸಿದ ಸಾಹಿತ್ಯ ವಚನಸಾಹಿತ್ಯ. ಹಾಗೂ ಸಕಲ ಜೀವಾತ್ಮರಿಗೆ ಲೇಸಾಗುವ ಪ್ರಗತಿಪರ ಸಮಾಜ ಪ್ರಸ್ತಾಪಿತವಾದವು.

ಆದರೆ ೧೨ನೇ ಶತಮಾನದ ಉತ್ತರಾರ್ಧದಲ್ಲಿ ಬಸವಣ್ಣನವರು ಕಲ್ಯಾಣ ತ್ಯಜಿಸಿದರು. ಅನುಭವ ಮಂಟಪ ಭಂಗವಾಯಿತು. ಶರಣರು ವಿಸ್ತಾಪಿತಗೊಂಡರು. ಬಹುತಾಂಶ ವಚನಸಾಹಿತ್ಯ ನಷ್ಟಗೊಳಿಸಲ್ಪಟ್ಟಿತು. ಇದಾದ ನಂತರ ಸುಮಾರು ೩೦೦ ವರ್ಷಗಳ ಕಾಲ ಲಿಂಗಾಯತ ಮತದ ಆಕಾಶ ಕತ್ತಲಿಂದ ಆವರಿಸಿತು. ಆದರೆ ಈ ಕಾಲದಲ್ಲಿ ಕುಂದಿದ ಲಿಂಗಾಯತ ಬತ್ತಿಗೆ ಪ್ರೇಮದ, ಭಕ್ತಿಯ ಸೃಜನತೆಯ ತೈಲವನ್ನು ಎರೆದು ಜ್ಯೋತಿ ನಂದದಂತೆ ನೋಡಿಕೊಂಡವು ಮೂರು ಪ್ರಮುಖ ಶಕ್ತಿಗಳು.

ಒಂದನೆಯದು ಲೋಕದ ಚೇತನದಲ್ಲಿ ಬೇರೂರಿ ಹದವಾಗುತ್ತ ಮೊಳಕೆ ಮೂಡಿಸಲು ಸಕಾಲದ ದಾರಿ ಕಾಯುತ್ತ ಕುಳಿತ ಬಸವತತ್ತ್ವ ವಚನ ದರ್ಶನ, ಲಿಂಗಾಯತ ಮತದ ಬೀಜ.

ಎರಡನೆಯದು ತೆಲುಗು ನಾಡಿನಲ್ಲಿ ಮಹಾಕವಿ ದಾರ್ಶನಿಕ ಶರಣ ಪಾಲ್ಕುರಿಕೆ ಸೋಮನಾಥನು ತೆಲುಗು ಭಾಷೆಯಲ್ಲಿ ೧೨ನೇ ಶತಮಾನದ ಉತ್ತರಾರ್ಧ ಮತ್ತು ೧೩ನೇ ಶತಮಾನದ ಆರಂಭದಲ್ಲಿ ರಚಿಸಿದ ಮಹಾಕಾವ್ಯ 'ಬಸವಪುರಾಣ'.

ಮೂರನೆಯದಾಗಿ ಕ್ರಿ.ಶ. ೧೩೬೯ರ ಸುಮಾರಿಗೆ ಶ್ರೀಶೈಲದ ದಕ್ಷಿಣ ದ್ವಾರವೆಂದು ಗುರುತಿಸಲಾಗುವ ಸಿದ್ಧವಟಪುರದ ಭೀಮಕವಿ ಪಾಲ್ಕುರಿಕೆ ಸೋಮನಾಥನ ತೆಲುಗುವಿನ ಬಸವ ಪುರಾಣವನ್ನು ಕನ್ನಡ ಭಾಷೆಯಲ್ಲಿ ರಚಿಸಿದ 'ಬಸವ ಪುರಾಣ'. ಕನ್ನಡ ಬಸವಪುರಾಣದಲ್ಲಿ ಭೀಮಕವಿ ಬರೆಯುತ್ತಾನೆ

**"ಬಸವನೆಂದುಸುರಿದಡೆ ಸಾಲದೆ**

*Indian Streams Research Journal*
*Vol - I , ISSUE - V [ June 2011 ]* ISSN:-2230-7850

**ಪಶುವಿಗಾದಡೆ ಭಕ್ತಿ ದೊರಕುಗು**
**ಬಸವನೆಂದುಸುರಿದಡೆ ಸಾಲದೆ ಶಿಶುವಿಗಹುದು ಭಕ್ತಿ**
**ಬಸವಾ ಬಸವಾಯೆಂಬ ಭಕ್ತರ**
**ದೆಸೆಯನೀಕ್ಷಿಸುತಿರ್ಪ ಪಕ್ಷಿಯ**
**ಪ್ರಸಾರಕ್ಕಾದಡೆಯೆಸೆಯದೇ**
**ಶಿವಭಕ್ತಿ ವಸುಧೆಯಲಿ"**

ಹೀಗೆ ಮತ್ತೆ ೨೦೦ ವರ್ಷಗಳ ಲಿಂಗಾಯತವು ದೆಸೆಯನೀಕ್ಷಿಸುತಿರ್ಪ ಪಕ್ಷಿಯಂತೆ ಹೊಸದಿನದ ದಾರಿ ಕಾಯುತ್ತ ಬಸವನ ಭಕ್ತಿಯಲಿ ಕಾಲ ಕಳೆಯುತ್ತಾ ನಿಂತಿತಾದರೂ ಲಿಂಗಾಯತದ ಯುವಶಕ್ತಿ ಬೂದಿ ಮರೆಯ ಕಿಚ್ಚಿನಂತೆ ಉರಿಯುತ್ತಿತ್ತು. ಅದೇ ಕಿಚ್ಚು ಧರ್ಮ ಪುನರುಜ್ಜೀವನದ ಬಿರುಗಾಳಿ ತಗಲಿ ಭುಗಿಲೆದ್ದಿತು. ಸಂಗಮ ಮನೆತನದ ಶೂರರು ಧರ್ಮ ಪುನಃ ಸ್ಥಾಪನೆಯ ಮಹೋದ್ದೇಶದಿಂದ ಕ್ರಿ.ಶ. ೧೩೩೬ರಲ್ಲಿ ಮೊದಲನೆ ಬುಕ್ಕನ ನೇತೃತ್ವದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆರಂಭಿಸಿದರು. ೨ನೇ ಬುಕ್ಕರಾಯನ ಕಾಲದಲ್ಲಿ ೧೪೦೪-೦೬ ಅದು ಸ್ಥಿರತೆ ಕಂಡಿತು. ಮುಂದೆ ಒಂದನೆಯ ದೇವರಾಯನ ಕಾಲದಲ್ಲಿ (೧೪೦೬-೧೪೨೨) ಸ್ಥಿರ ಸಂಗಮ ವಂಶದ ರಾಜ್ಯ ಅಸ್ತಿತ್ವದಲ್ಲಿ ಬಂದಿತು. ೧೪೨೪ರಲ್ಲಿ ಇದೇ ವಂಶದ ಪ್ರೌಢದೇವರಾಯ ಶೂರಚಕ್ರವರ್ತಿ ೧೪೨೪ ರಿಂದ ೧೪೪೬ರ ವರೆಗೆ ಕನ್ನಡ ನಾಡನ್ನಾಳಿದ. ಈತನ ಆಳ್ವಿಕೆಯಲ್ಲಿ ಆದಂತಹ ಲಿಂಗಾಯತ ಮತೋದ್ಧಾರದ ಕಾರ್ಯ ಅವನ ಮೊದಲು ಮತ್ತು ನಂತರದಲ್ಲೂ ಆಗಿಲ್ಲ. ಪ್ರೌಢದೇವರಾಯನ ಮಹಾ ಪ್ರಧಾನಿ, ಅನುಭಾವಿ, ಮಹಾಜ್ಞಾನಿ ಶರಣ ಲಕ್ಕಣ್ಣದಂಡೇಶ ಲಿಂಗಾಯತ ಮತ ತತ್ತ್ವತಂತ್ರ ಸಿದ್ಧಾಂತ "ಶಿವ ತತ್ತ್ವ ಚಿಂತಾಮಣಿ"ಯನ್ನು ರಚಿಸಿದನು. ಅಷ್ಟೇ ಅಲ್ಲ ಚಕ್ರವರ್ತಿಯ ಸಹಾಯದಿಂದ ಅಲ್ಲಿಯವರೆಗೆ ಶಕ್ತಿಶಾಲಿಯಾಗಿದ್ದ ಪಾಶುಪತ ಮತ್ತು ಕಾಳಾಮುಖ ಪಂಥಗಳನ್ನು ಲಿಂಗವಂತ ಮತದಲ್ಲಿ ವಿಲೀನ ಮಾಡುವ ಮಹತ್ಕಾರ್ಯ ಮಾಡಿದನು.

ಪ್ರೌಢದೇವರಾಯನು ಕ್ರಿ.ಶ. ೧೪೨೪-೧೪೨೬ರ ಕಾಲದಲ್ಲಿ ೧೦೧ ವಿರಕ್ತ ಸಂಘಟನೆ ಸ್ಥಾಪನೆ ಮಾಡಿದನು. ಇದರ ಸದಸ್ಯರಾದ ಅನುಭಾವಿಸಿದ್ಧರು ರಾಷ್ಟ್ರದ ವಿವಿಧ ಮಹತ್ತ್ವದ ಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸಿ ಲಿಂಗಾಯತ ಸಾಂಸ್ಕೃತಿಕ ಪುನರುಜ್ಜಿವನಗೊಳಿಸಿದರು. ಕತ್ತಲಡಿಯಲ್ಲಿ ಕಣ್ಮರೆಯಾದ ವಚನ ಸಾಹಿತ್ಯವನ್ನು ಶೋಧಿಸಿ ಷಟಸ್ಥಲ ಸಿದ್ಧಾಂತಗಳಿಗೆ ಅನುಗುಣವಾಗಿ ವಿಂಗಡಿಸಿ, ಕ್ರೋಢಿಕರಿಸಿ ಲಿಂಗಾಯತ ಮತ ಸಿದ್ಧಾಂತಗಳನ್ನು ವಿನೂತನ ರೂಪದಲ್ಲಿ ಪ್ರಸ್ತುತ ಪಡಿಸಿದರು. ಅದಕ್ಕೆ ಆಧಾರಭೂತವಾದ ಕನ್ನಡ ಭಾಷೆಯಲ್ಲಿಯ ವಚನಸಾಹಿತ್ಯಕ್ಕೆ ಶಾಸ್ತ್ರದ ಸ್ಥಾನ ಒದಗಿಸಿಕೊಟ್ಟರು. ವಚನಗಳನ್ನು ವಚನ ದರ್ಶನ ವಾಗಿಸಿದರು. ಈ ಕಾಲದ ಮಹಾಲಿಂಗದೇವರು, ಕಲ್ಲುಮಠದ ಪ್ರಭುದೇವರು, ಮಗ್ಗೆಯ ಮಾಯಿದೇವ ಮೊದಲಾದ ಮಹಾನುಭಾವಿ ಶರಣರು ಇಷ್ಟಲಿಂಗ ಯೋಗದಿಂದ ಸಾಧಿಸಿದ ಸಮಷ್ಠಿ ಪ್ರಜ್ಞೆಯಿಂದ ವಚನಸತ್ಯವನರಿದು ಪ್ರಾಮಾಣಿಕ ರೂಪದಲ್ಲಿ ಸಮಾಜಕ್ಕೆ ಅರ್ಪಿಸಿದರು.

ಇವರ ಕಾಲದಲ್ಲಿಯೇ ಶರಣ ಶಿವಗಣ ಪ್ರಸಾದಿ ಮಹಾದೇವ. ಶರಣ ಹಲಗೆಯಾರ್ಯ ೨ ಶೂನ್ಯ ಸಂಪಾದನೆಗಳನ್ನು ಬರೆದು ಸಾಹಿತ್ಯ, ಲೋಕಕಲೆ, ಅಧ್ಯಾತ್ಮಿಕ ಚಿಂತನೆಗಳಿಗೆ ನವರೂಪದಲ್ಲಿ ತಂದು ಅವುಗಳಿಗೆ ವಚನಗಳಾಧಾರಿತ ಚಾಲನೆ ಕೊಟ್ಟರು.

ಪ್ರೌಢದೇವರಾಯನ ನಂತರ ಆತನ ಮಗ ಮಲ್ಲಿಕಾರ್ಜುನ ಸಿಂಹಾಸನವನ್ನೇರಿದ. ಆದರೆ ಈತನ ಕಾಲದಲ್ಲಿ ಅಂತಃಕಲಹ, ಮತ್ತು ಬಾಹ್ಯ ಆಕ್ರಮಣಗಳಿಂದ ವಿಜಯನಗರದ ಸಂಗಮವಂಶದ ಸಾಮ್ರಾಜ್ಯ ಶಿದಿಲವಾಗಿ ಕ್ರಿ.ಶ.೧೪೮೫ರಲ್ಲಿ ಕೊನೆಗೊಂಡಿತು.

ಈತನ ಕಾಲದಲ್ಲಿಯೇ ಲಿಂಗಾಯತಕ್ಕೆ ರಾಜಾಶ್ರಯ ತಪ್ಪಿ ಅದು ಇಳಿಮುಖದ ದಾರಿ ಹಿಡಿಯಿತು. ಈ ಕಾಲದಲ್ಲಿ ರಚಿತವಾದ ವಿರುಪಾಕ್ಷ ಪಂಡಿತನ 'ಚನ್ನಬಸವ' ಪುರಾಣದಿಂದ ಕಂಡು ಬರುವ ಸಂಗತಿಯೇನೆಂದರೆ ಪ್ರೌಢದೇವರಾಯನ ಆಳ್ವಿಕೆ ಮುಗಿಯುತ್ತಿದ್ದಂತೆ ಮತ್ತೆ ಲಿಂಗಾಯತಕ್ಕೆ ಅವನತಿ ಪ್ರಾಪ್ತಿಯಾಯಿತು. ಧರ್ಮಕ್ಕೆ ಭಯಂಕರವಾದ ಗ್ಲಾನಿ ಒದಗಿತು. ಇಂಥ ಪರಿಸ್ಥಿತಿಯಲ್ಲಿ ಕ್ರಿ.ಶ. ೧೪೭೦ರ ಸುಮಾರಿಗೆ ನಿರಂಜನ ಗಣೇಶ್ವರನೆಂಬ ಸಾಧಕನೊಬ್ಬನು ಕಗ್ಗೇರಿಯ ತೋಂಟಕ್ಕೆ ಬಂದು ಪ್ರಖರವಾದ ಇಷ್ಟಲಿಂಗಯೋಗ ಸಾಧನೆ ಮಾಡಿತೋಂಟದ ಸಿದ್ಧಲಿಂಗನೆಂಬ ನಾಮದಿಂದ ಖ್ಯಾತನಾದ. ಅವನು ಕ್ರಿ.ಶ. ೧೪೭೦ ರ ನಂತರ ಕೆಲವೇ ಕಾಲದಲ್ಲಿ ಎಡೆಯೂರಿನಲ್ಲಿ ತೋಂಟದ ಸಿದ್ದೇಶ್ವರ ಸಂಘಟನೆ ಕಟ್ಟಿದ. ಇದನ್ನು ಕ್ರಿ.ಶ. ೧೪೭೦ ರಿಂದ ೧೫೦೦ರವರೆಗೆ ಸಮರ್ಥವಾಗಿ ಸಂಚಲಿಸಿದ.

೧೨ನೇ ಶತಮಾನದ ಕಲ್ಯಾಣದ ಅನುಭವಮಂಟಪದೋಪಾದಿಯಲ್ಲಿ ತನ್ನ ಸಂಘಟನೆಯಲ್ಲಿ ೭೦೦ ಶಿಷ್ಯ ಸಂಪತ್ತಿಯನ್ನು ಜೋಡಿಸಿ ಅನುಗ್ರಹಿಸಿದ, ಅದಕ್ಕೆ ತನ್ನ ಅಪೂರ್ವ ಸಂಘಟನಾ ಶಕ್ತಿ ಹಾಗೂ ಶರಣ ಧರ್ಮ ಮೇಲೆತ್ತುವ ಚೇತನಾ ಗುಣಗಳನ್ನು ಜೋಡಿಸಿ, ರಾಷ್ಟ್ರದ ಮೂಲೆ ಮೂಲೆಯಲ್ಲಿ ಮತ್ತೆ ಲಿಂಗಾಯತ ಧರ್ಮದ ಜಯಘೋಷ ಕೇಳಿ ಬರುವಂತೆ ಮಾಡಿದ.

ಮಹಾಲಿಂಗಗುರು ಶಿವಸಿದ್ದೇಶ್ವರ ಪ್ರಭುವೆ ಎಂಬ ಅಂಕಿತದಲ್ಲಿ ನವವಚನಗಳನ್ನು ರಚಿಸಿ "ಷಟಸ್ಥಲ ಜ್ಞಾನ ಸಾರಾಮೃತ' ಎಂಬ ಶೀರ್ಷಿಕೆಯಲ್ಲಿ ವಚನ ಗ್ರಂಥ ರಚಿಸಿದ. ಈತನ ಶಿಷ್ಯಕೋಟಿಯಲ್ಲಿ ಘನಲಿಂಗ, ಸ್ವತಂತ್ರಸಿದ್ದಲಿಂಗ, ಗುಮ್ಮಳಾಪುರದ ಸಿದ್ಧಲಿಂಗೇಶ್ವರರು ಸ್ವತಂತ್ರ ವಚನಗಳನ್ನು ರಚಿಸಿದರು. ಈತನ ದಿವ್ಯ ಪರಂಪರೆಯ ಪೀಠಕ್ಕೆ ೨೧ನೇ ಶತಮಾನದವರೆಗೆ ೧೮ ಪೀಠಾಧಿಪತಿಗಳು ಆಗಿ ಹೋಗಿದ್ದಾರೆ.

ಅವರಲ್ಲಿ ೧೯ನೇ ಪೀಠಾಧಿಪತಿ ಲಿಂಗೈಕ್ಯಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು. ಇವರು ವಿಜಯಪುರದ ಸಿಂಧನೂರಿನಲ್ಲಿ ಸಾಮಾನ್ಯ ಕುಟುಂಬದಲ್ಲಿ ಜನಿಸಿ ತನ್ನ ಪ್ರತಿಭೆ ಕರ್ತೃತ್ವ, ಸಾಧನೆ ಹಾಗೂ ಲಿಂಗನಿಷ್ಠೆಯ ಬಲದಿಂದ ಮೂಲಪುರುಷ ಎಡೆಯೂರು ಸಿದ್ಧಲಿಂಗನ ಪೀಠಾಧಿಪತಿಯಾದರು. ನಾಡಿನ ಜನರು ಅವರಿಗೆ ಪ್ರೀತಿ ಮತ್ತು ಆದರದಿಂದ ಜಗದ್ಗುರು ಎಂದು ಕರೆಯುತ್ತಿದ್ದರು.

ವೈಯಕ್ತಿಕವಾಗಿ ನನಗೆ ಅವರ ಸಾನಿಧ್ಯ ದೊರಕದಿದ್ದರು ಕೆಲವು ಸಲ ಗದುಗಿನ ಮಠಕ್ಕೆ ಹೋದಾಗ, ಹಾಗು ಅವರು ಅನೇಕ ಸಲ ಭಾಲ್ಕಿ ಹಿರೇಮಠದ ಕಾರ್ಯಕ್ರಮಗಳಿಗೆ ಮತ್ತು ಬೀದರಿನ ಬಸವಗಿರಿಗೆ ಬಂದಾಗ ಅವರ ದರ್ಶನ ಪಡೆದು ಆಶೀರ್ವಚನ ಆಲಿಸುವ ಭಾಗ್ಯ ನನಗೆ ಲಭಿಸಿದೆ. ಅವರು ಬಸವಾದಿ ಶರಣರ ಮಹಾನ ಪರಂಪರೆಯಲ್ಲಿ ಅಚಲ ನಿಷ್ಠೆ ಭಕ್ತಿ ಮತ್ತು ನಂಬಿಕೆ ಉಳ್ಳವರಾಗಿದ್ದರು.

ಅವರು ಒಂದು ಸುಸಂಘಟಿತ, ಬಲಶಾಲಿ ಅನುಶಾಸಿತ ಪ್ರಗತಿಪರ ಸಮಾಜವನ್ನು ಕಟ್ಟುವ ಸ್ವಪ್ನವನ್ನು ಹೃದಯದಲ್ಲಿ ಕಟ್ಟಿಕೊಂಡು ಬಾಳಿದ ತತ್ತ್ವಜ್ಞಾನಿ ದಾರ್ಶನಿಕರಾಗಿದ್ದರು. ಅಧ್ಯಾತ್ಮಿಕ ಸಮಷ್ಟಿ ಪ್ರಜ್ಞೆಯ ಪರಿಪೂರ್ಣತೆಯ ಅನುಭೂತಿ ಅವರು ದೀನ, ದಲಿತ, ಹಿಂದುಳಿದ ವಂಚಿತರ ಅಸಂಘಟಿತ ಕಾಯಕ ಜೀವಿಗಳ ಸೇವೆಯಲ್ಲಿ ಕಂಡಿದ್ದರು. ನೇಗಿಲಯೋಗಿಗಳೆಂದರೆ ಅವರಿಗೆ ಪ್ರಾಣ ಜೀವಾಳ. ಔದ್ಯೋಗಿಕರಣ, ಸುಶಿಕ್ಷಿತ ಯುವಕರ ಕೈಗೆ ಕೆಲಸ ಕೊಟ್ಟು, ಉತ್ಪನ್ನ ಹೆಚ್ಚಿಸುವ ಹೆಸರಿನಲ್ಲಿ ಒಕ್ಕಲಿಗರಿಗೆ ಬಿಸಿಲು ಮರಿಚಿಕೆ ತೋರಿಸಿ ಅವರ ಭೂಮಿಯನ್ನು ದೋಚಿಕೊಳ್ಳಬೇಕೆಂಬ ಉದ್ಯೋಗಪತಿಗಳನ್ನು ಕಂಡರೆ ಅವರಿಗೆ ಎಲ್ಲಿಲ್ಲದ ಸಂತಾಪ. ಇಂಥ ಮೋಸಗಾರಿಕೆ ವಿರುದ್ಧ ನಡೆಸಿದ ಅವರ ಜನಾಂದೋಲನಗಳು ದೇಶದಲೆಲ್ಲಾ ಹೆಸರಾಗಿವೆ.

ನಿಸರ್ಗವನ್ನು ಅವರು ತಾಯಿಯಂತೆ ಪೂಜಿಸುತ್ತಿದ್ದರು. ನಿಸರ್ಗವನ್ನು ಕೆಡಿಸುವವರ ವಿರುದ್ಧ ಪ್ರಾಣಾಂತಿಕ ಹೋರಾಟಕ್ಕಾಗಿ ಸದಾ ಸಿದ್ಧರಾಗಿರುತ್ತಿದ್ದರು. ತತ್ತ್ವಶಾಸ್ತ್ರದ ಸ್ನಾತಕೋತ್ತರ ಪದವಿಧರರಾಗಿದ್ದ ಮೇಧಾವಿ ವಿದ್ವಾಂಸರಾಗಿದ್ದರು. ಅವರು ಎಂದೂ ವಿಚಾರಗಳ ಗೊಂದಲಕ್ಕೆ ಸಿಲುಕಿದವರಲ್ಲ. ಸ್ಪಟಿಕದಂತೆ ಸ್ಪಷ್ಟವಾದ ಅವರ ವಾಣಿರಾಗ-ದ್ವೇಷ ವಿರಹಿತವಾಗಿ ವಸ್ತು ನಿಷ್ಠತೆಯಿಂದ ಸತ್ಯವನ್ನು ಜನರ ಮುಂದೆ ಇಡುತ್ತಿದ್ದರು. ಅವರ ಶರೀರದ ಕಣಕಣದಲ್ಲಿ ಜೀವನದ ಕ್ಷಣಕ್ಷಣದಲ್ಲಿ ಸಮಾಜೋನ್ನತಿ, ಅಸಹಾಯಕರ ಸೇವೆಯನ್ನು ತುಂಬಿಟ್ಟುಕೊಂಡು ಬಾಳಿದರು. ನನ್ನ ಭಾವನೆಯಲ್ಲಿ ಅವರಿಗೆ ಸಮಾಜವೇ ದೇವರು. ಸಮಾಜ ಸೇವೆಯೇ ಅವರ ಉಸಿರಾಗಿತ್ತು. ಬಸವಭಕ್ತಿ ಅವರ ಪ್ರಾಣವಾಗಿತ್ತು. ಬಸವನಾಗಿ ಬಾಳಿದರು, ಬಸವನಾಗಿ ಸವೆದರು ಬಸವನಾಗಿ ಅಗಲಿದ ಆ ವಿರಾಟ ಚೇತನ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು. ಅವರ ಗೌರವಾರ್ಥವಾಗಿ ಎರಡು ಶಬ್ದಗಳನ್ನು ಬರೆಯಲು ಅವಕಾಶ ದೊರಕಿದುದು ನನ್ನ ಮೇಲಿರುವ ಬಸವ ಕೃಪೆಯೇ ಎಂದು ಭಾವಿಸುತ್ತೇನೆ.

**ಆಕರ ಗ್ರಂಥಗಳು**

೧) ಸಮಗ್ರ ವಚನ ಸಂಪುಟ-೧೫

೨) ಸಂಕ್ಷಿಪ್ತ ಕನ್ನಡ ನಿಘಂಟು – ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

೩) ಶೀಲವಂತ ಶರಣ ಏಲೇಶ್ವರ ಕೇತಯ್ಯ – ಡಾ. ಸೋಮನಾಥ ಯಾಳವಾರ

೪) ಬಸವ ಸಂಪದ – ಅಕ್ಕ ಅನ್ನಪೂರ್ಣ ತಾಯಿ

೫) ಬಸವಣ್ಣ ಪ್ರಸಾದ – ಕಾಶಪ್ಪ ಧನ್ನೂರು

೬) ವಿಶ್ವಗುರು ಬಸವಣ್ಣನವರ ವಚನಗಳು - ಫ.ಗು. ಹಳಕಟ್ಟಿ (ಸಂ) ೧೯೪೨